# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 738

ಸದಸ್ಯರ ಹೆಸರು : ಶ್ರೀ.ಎಂ. ನಾಗರಾಜು (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 18.08.2025

ಉತ್ತರಿಸುವ ಸಚಿವರು : ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಸಣ್ಣ ವಾಸಸ್ಥಳ/ ಹಳ್ಳಿಗಳಿಂದ (Habitations/Hamlets) ಅಥವಾ ಡಿಡಿಪಿಐ/ಸ್ಥಳೀಯ ಪ್ರಾಧಿಕಾರವು ಗುರುತಿಸಿದ ಯಾವುದೇ ಇತರೆ ಸ್ಥಳದಿಂದ ಬರುವ ಮಕ್ಕಳಿಗೆ ಸಮಗ್ರ ಶಿಕ್ಷಣ ಯೋಜನೆಯಡಿ ಉಚಿತ ಸಾರಿಗೆ ಸೌಲಭ್ಯ ನೀಡಲು ಸರ್ಕಾರದ ವತಿಯಿಂದ 2020-21 ಮತ್ತು 2021-22ರಲ್ಲಿ ಆಯಾ ಜಿಲ್ಲೆಗಳಿಗೆ ಅನುದಾನ ನೀಡಿರುವುದು ನಿಜವೇ; | ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ ಶಾಲಾ ಲಭ್ಯತೆಯಿಲ್ಲದ ಜನವಸತಿ ಪ್ರದೇಶಗಳ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳಿಗೆ 2020-21ನೇ ಸಾಲಿನಲ್ಲಿ ಸಾರಿಗೆ ಭತ್ಯೆ ಒದಗಿಸಲಾಗಿದೆ.<br><br>2021-22ನೇ ಸಾಲಿನಲ್ಲಿ ಸಾರಿಗೆ ಭತ್ಯೆ ಬಿಡುಗಡೆ ಮಾಡಿರುವುದಿಲ್ಲ. |
| ಆ) | ನೀಡಿದ್ದಲ್ಲಿ ಈ ಯೋಜನೆಗಾಗಿ ರೂ. 16 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿರುವುದು ನಿಜವೇ; ಇದ್ದಲ್ಲಿ ಸದರಿ ಮೊತ್ತದಲ್ಲಿ ಇಲಾಖೆ ವತಿಯಿಂದ ಅಂದಾಜು 40 ಲಕ್ಷ ಮೊತ್ತ ಖರ್ಚು ಮಾಡಿರುವುದು ನಿಜವೇ; | 2020-21ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ ಈ ಯೋಜನೆ ಅಡಿಯಲ್ಲಿ ರೂ. 16.00 ಕೋಟಿ ಅನುದಾನ ಬಿಡುಗಡೆ ಮಾಡಿರುವುದಿಲ್ಲ. ಆದರೆ ರೂ. 28,80,000/- ಗಳ ಸಾರಿಗೆ ಭತ್ಯೆ ಬಿಡುಗಡೆ ಮಾಡಲಾಗಿದೆ. |
| ಇ) | ಇಲಾಖಾವತಿಯಿಂದ ಅಂದಾಜು ಶೇ. 20ರಷ್ಟು ಅನುದಾನವನ್ನು ಖರ್ಚು ಮಾಡಲು ಕಾರಣಗಳೇನು; (ಸುಮಾರು 18,000 ಮಕ್ಕಳು ಈ ಸೌಲಭ್ಯವನ್ನು ಪಡೆಯಲು ಪ್ರಸ್ತಾಪಿಸಿರುತ್ತಾರೆ) | 2020-21ನೇ ಸಾಲಿನಲ್ಲಿ ಸಮಗ್ರ ಶಿಕ್ಷಣ ಕರ್ನಾಟಕ ವತಿಯಿಂದ 4,800 ವಿದ್ಯಾರ್ಥಿಗಳಿಗೆ ರೂ. 28,80,000/- ಗಳ ಸಾರಿಗೆ ಭತ್ಯೆ ಬಿಡುಗಡೆ ಮಾಡಲಾಗಿದೆ ಹಾಗೂ ಸದರಿ ಭತ್ಯೆಯನ್ನು ಖರ್ಚು ಮಾಡಲಾಗಿರುತ್ತದೆ. |
| ಈ) | ಸದರಿ ಸೌಲಭ್ಯವು ಈಗಲೂ ಚಾಲ್ತಿಯಲ್ಲಿದೆಯೇ; ಇದ್ದರೆ ಎಷ್ಟು ಮಕ್ಕಳು ಈ ಸೌಲಭ್ಯವನ್ನು ಪಡೆದಿರುತ್ತಾರೆ; ಇಲ್ಲವಾದಲ್ಲಿ ಯಾವ ಕಾರಣಗಳಿಂದ ಈ ಸೌಲಭ್ಯವನ್ನು ತಡೆಹಿಡಿಯಲಾಗಿದೆ? | ಸದರಿ ಸೌಲಭ್ಯವು ಈಗಲೂ ಚಾಲ್ತಿಯಲ್ಲಿರುತ್ತದೆ. ಸಮಗ್ರ ಶಿಕ್ಷಣ ಕರ್ನಾಟಕವತಿಯಿಂದ 2024-25ನೇ ಸಾಲಿಗೆ ಶಾಲಾ ಲಭ್ಯತೆಯಿಲ್ಲದ ಜನವಸತಿ ಪ್ರದೇಶಗಳ 19 ಜಿಲ್ಲೆಗಳ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಶಾಲೆಗಳಲ್ಲಿ ಕಲಿಯುತ್ತಿರುವ ಸುಮಾರು 23,570 ಮಕ್ಕಳಿಗೆ ರೂ.1414.20 ಲಕ್ಷಗಳ ಅನುದಾನವನ್ನು ನೇರವಾಗಿ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗೆ ಬಿಡುಗಡೆ ಮಾಡಲಾಗಿದೆ. |

ಇಪಿ 238 ಯೋಸಕ 2025

(ಎಸ್.ಮಧುಬಂಗಾರಪ್ಪ)
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು